MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 30-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಬಹಳ ಕುಸಿತದ ನಂತರ ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ ಸ್ವಲ್ಪ ಚೇತರಿಕೆ

ಈ ತಿಂಗಳಲ್ಲಿ ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ 21.5 ಶೇಕಡಾ ಕುಸಿತ ಕಂಡಿತ್ತು. ಈಗ 1 ಶೇಕಡಾ ಚೇತರಿಕೆ ಕಂಡಿದೆ. ಇಂಡೋನೇಶಿಯಾ ಬಯೋಡೀಸೆಲ್‌ಗೆ ಪಾಮೆಣ್ಣೆ ಬಳಕೆ 30 ಶೇಕಡಾದಿಂದ 35 ಶೇಕಡಾ ಕ್ಕೆ ಹೆಚ್ಚಳದ ಪ್ರಕಟಣೆಯಿಂದ ದರ ಸ್ವಲ್ಪ ಚೇತರಿಕೆ ಕಂಡಿದೆ. ಮಲೇಶ್ಯನ್ ಪಾಮೆಣ್ಣೆ ತಿಂಗಳ ಅಂತ್ಯದ ದಾಸ್ತಾನು ಹೆಚ್ಚಳವಾಗುವ ನಿರೀಕ್ಷೆಯಿದೆ. ರಫ್ತು ನಿರ್ಬಂಧ ವಿಧಿಸಿದ್ದ ಇಂಡೋನೇಶ್ಯದ ಪಾಮೆಣ್ಣೆ ದಾಸ್ತಾನು 7.5 ಮಿಲಿಯನ್ ಟನ್‌ಗಳಿಗೇರಬಹುದೆನ್ನಲಾಗಿದೆ. ಮಲೇಶ್ಯ ದ ಮಿಲ್‌ಗಳು ಉತ್ಪಾದನೆ ನಿಲ್ಲಿಸಬಾರದೆಂದೂ, ರೈತರಿಂದ ಪಾಮ್ ಹಣ್ಣು ಖರೀದಿಸಬೇಕೆಂದೂ ಅಲ್ಲಿನ ಸಂಘಟನೆಗಳು ಹಾಗೂ ಸರಕಾರ ಹೇಳಿವೆಯೆನ್ನಲಾಗಿದ್ದು, ಹಾಗೂ ಮುಂದಿನ ದಿನಗಳಲ್ಲಿ ಕೂಲಿ ಕಾರ್ಮಿಕರ ಲಭ್ಯತೆ ಸುಧಾರಿಸುವ ಸಾಧ್ಯತೆಯಿದ್ದು, ಉತ್ಪಾದನೆ ಹೆಚ್ಚಳವಾಗುವ ಸಾಧ್ಯತೆಯಿದೆ. ಇತರ ಪರ್ಯಾಯ ಖಾದ್ಯತೈಲಗಳ ದರವೂ ಇಳಿಕೆಯಲ್ಲಿದ್ದು, ಉತ್ಪಾದನಾ ಹೆಚ್ಚಳ ಬೇಡಿಕೆ ಇಳಿಕೆಯಿಂದ ದರ ಸ್ಥಿರ ಅಥವಾ ಇಳಿಕೆಯಾಗುವ ಸಾಧ್ಯತೆಯಿದೆ.

## ಫೀಡ್ಸ್ ದರ ಹೆಚ್ಚಳದಿಂದ ಮೊಟ್ಟೆ, ಬ್ರಾಯ್ಲರ್ ದರ ಹೆಚ್ಚಳ

ಪೌಲ್ಟ್ರಿ ಫೀಡ್ಸ್‌ಗಳ ದರ ಹೆಚ್ಚಳದಿಂದ ಮೊಟ್ಟೆ, ಬ್ರಾಯ್ಲರ್ ದರಗಳು ಹೆಚ್ಚಳವಾಗಿವೆಯೆನ್ನಲಾಗಿದೆ. ಮೊಟ್ಟೆ ದರಗಳು ಹಿಂದಿನ 6 ತಿಂಗಳಲ್ಲೇ ಗರಿಷ್ಠ ಮಟ್ಟ ತಲುಪಿದ್ದು, ಒಂದು ವಾರದಂದೀಚೆ 100 ಕ್ಕೆ ರೂ.40–45 ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಮುಂಗಾರು ಪ್ರಾರಂಭದಲ್ಲೇ ಮೊಟ್ಟೆ, ಬ್ರಾಯ್ಲರ್ ದರಗಳು 20–25 ಶೇಕಡಾ ಹೆಚ್ಚಳದಿಂದಾಗಿ ಫಾರ್ಮರ್ಸ್‌ಗಳ ನಿರ್ವಹಣಾ, ಉತ್ಪಾದನಾ ವೆಚ್ಚ ಹೆಚ್ಚಳದಿಂದಾಗಿ ಗಳಿಕೆಯ ಅಂಶ ಇಳಿಕೆಯಾಗಿದೆಯೆನ್ನಲಾಗಿದೆ. ಇದರೊಂದಿಗೆ ಇಂಧನ ದರ ಹೆಚ್ಚಳವೂ ಸೇರಿ ಉದ್ಯಮಕ್ಕೆ ಸವಾಲಾಗಿದೆಯೆನ್ನಲಾಗಿದೆ.